॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

# ದ್ವೈತ ಸಾಮ್ರಾಜ್ಯ ವೈಭವಮ್

ನಾಗರಾಜು ಹಾವೇರಿ – ಪಲ್ಲವೀಪ್ರಿಯ – ಬೆಂಗಳೂರು – 9901052578

## ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

# ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಗುರುಪರಂಪರೆ.

ಸಾಕ್ಷಾತ್ ಶ್ರೀಹಂಸನಾಮಕ ಪರಮಾತ್ಮನಿಂದ ಅವಿಚ್ಛಿನ್ನವಾಗಿ ನಡೆದು ಬಂದ ಭಾಗವತೋತ್ತಮರಾದ ಕಲಿಯುಗದ ಕಲ್ಪವೃಕ್ಷ – ಕಾಮಧೇನುವೆಂದು ಪ್ರಖ್ಯಾತರಾದ ಶ್ರೀರಾಘವೇಂದ್ರಸ್ವಾಮಿಗಳವರ

# ವಂಶವೃಕ್ಷ

1. ಶ್ರೀಹಂಸನಾಮಕ ಪರಮಾತ್ಮ
2. ಶ್ರೀಬ್ರಹ್ಮದೇವರು
3. ಶ್ರೀಸನಕತೀರ್ಥರು
4. ಶ್ರೀಸನಂದನತೀರ್ಥರು
5. ಶ್ರೀಸನತ್ಕುಮಾರತೀರ್ಥರು
6. ಶ್ರೀಸನಾತನತೀರ್ಥರು
7. ಶ್ರೀದೂರ್ವಾಸತೀರ್ಥರು
8. ಶ್ರೀಜ್ಞಾನನಿಧಿತೀರ್ಥರು
9. ಶ್ರೀಗರುಡವಾಹನತೀರ್ಥರು
10. ಶ್ರೀಕೈವಲ್ಯತೀರ್ಥರು
11. ಶ್ರೀಜ್ಞಾನೇಶತೀರ್ಥರು
12. ಶ್ರೀಪರತೀರ್ಥರು
13. ಶ್ರೀಸತ್ಯಪ್ರಜ್ಞತೀರ್ಥರು
14. ಶ್ರೀಪ್ರಾಜ್ಞತೀರ್ಥರು

# ಶ್ರೀಅಚ್ಯುತಪ್ರೇಕ್ಷಾಚಾರ್ಯರು

ಶ್ರೀಮನ್ಮಧ್ವಾಚಾರ್ಯರು ಶ್ರೀವೇದವ್ಯಾಸದೇವರಿಂದ ಪ್ರಣೀತವಾದ ಭಾಗವತ ಧರ್ಮವು ಶ್ರೀಮನ್ಮಧ್ವಾಚಾರ್ಯರ ಹೆಸರಿನ ಅನ್ವರ್ಥಕವಾಗಿ ಮಧ್ವಮತವೆಂದು ಪ್ರಸಿದ್ಧಿ ಹೊಂದಿದೆ. " ಹರಿಯ ಮತವೇ ಹನುಮನ ಮತವು – ಹನುಮನ ಮತವೇ ಹರಿಯ ಮತವು " ಎಂದು ದಾಸಸಾಹಿತ್ಯವೂ ಕೊಂಡಾಡಿದೆ. ಶ್ರೀಹಂಸನಾಮಕ ಪರಮಾತ್ಮನಿಂದ ಸ್ಥಾಪಿತವಾದ ಮಠವೇ ಶ್ರೀರಾಘವೇಂದ್ರಸ್ವಾಮಿಗಳವರ ಮಠ. ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನವೇ ಶ್ರೀರಾಘವೇಂದ್ರಸ್ವಾಮಿಗಳವರ ಮಠ.

# ಶ್ರೀಮನ್ಮಧ್ವಾಚಾರ್ಯರು

| | |
|---|---|
| ಪೂರ್ವಾಶ್ರಮದ ಹೆಸರು | : ಶ್ರೀವಾಸುದೇವ |
| ತಂದೆ | : ಶ್ರೀಮಧ್ಯಗೇಹಭಟ್ಟರು |
| ತಾಯಿ | : ವೇದವತಿಬಾಯಿ |
| ಅವತಾರ ಕ್ಷೇತ್ರ | : ಪಾಜಕ ಕ್ಷೇತ್ರ |
| ಆಶ್ರಮ ಗುರುಗಳು | : ಶ್ರೀಅಚ್ಯುತಪ್ರೇಕ್ಷಾಚಾರ್ಯರು |
| ಮೂಲರೂಪ | : ಸಾಕ್ಷಾತ್ ವಾಯುದೇವರು |

ಆಶ್ರಮ ಶಿಷ್ಯರು

ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಕ್ಷೋಭ್ಯತೀರ್ಥರು ಮತ್ತು ಅಷ್ಟಮಠಾಧೀಶರುಗಳು ಮುಂತಾದವರು.

ಗ್ರಂಥಗಳು

ಗೀತಾಭಾಷ್ಯ, ಗೀತಾತಾತ್ಪರ್ಯ, ಸೂತ್ರಭಾಷ್ಯ, ಅಣುಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ, ನಖಸ್ತುತಿ, ಯಮಕಭಾರತ, ದ್ವಾದಶಸ್ತೋತ್ರ, ಕೃಷ್ಣಾಮೃತಮಹಾರ್ಣವ, ತಂತ್ರಸಾರ, ಸದಾಚಾರಸ್ಮೃತಿ, ಜಯಂತೀನಿರ್ಣಯ, ಭಾಗವತ ತಾತ್ಪರ್ಯ, ಮಹಾಭಾರತತಾತ್ಪರ್ಯನಿರ್ಣಯ, ಸಂಹಿತಾ ಭಾಷ್ಯ, ಪ್ರಮಾಣಲಕ್ಷಣ, ಕಥಾಲಕ್ಷಣ, ಮಾಯಾವಾದಖಂಡನ, ಉಪಾಧಿಖಂಡನ, ಪ್ರಪಂಚ ಮಿಥ್ಯಾತ್ವಾನುಮಾನಖಂಡನ, ತತ್ತ್ವ ಸಂಖ್ಯಾನ, ತತ್ತ್ವವಿವೇಕ, ತತ್ತ್ವೋದ್ಯೋತ, ಕರ್ಮನಿರ್ಣಯ, ವಿಷ್ಣುತತ್ತ್ವನಿರ್ಣಯ, ಐತರೇಯ ಭಾಷ್ಯ, ತೈತ್ತಿರೀಯಭಾಷ್ಯ, ಬೃಹದಾರಣ್ಯಕಭಾಷ್ಯ, ಈಶಾವಾಸ್ಯಭಾಷ್ಯ, ಕಾಠಕೋಪನಿಷದ್ಭಾಷ್ಯ, ಛಾಂದೋಗ್ಯಭಾಷ್ಯ, ಅಥರ್ವಣಭಾಷ್ಯ, ಮಾಂಡೂಕ್ಯಭಾಷ್ಯ, ಷಟ್ಪ್ರಶ್ನಭಾಷ್ಯ, ತಲವಕಾರೋಪನಿದ್ಭಾಷ್ಯ.

**ಬ್ರಹ್ಮಾಂತಾ ಗುರುವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃಪತಿಃ ।**
**ಆಚಾರ್ಯಾಃ ಶ್ರೀಮದಾಚಾರ್ಯಾಸ್ಸಂತು ಮೇ ಜನ್ಮ ಜನ್ಮನಿ ॥**

**ಮಾಘ ಶುದ್ಧ ನವಮೀ ಅದೃಶ್ಯರಾಗಿ ಬದರಿಕಾಶ್ರಮಕ್ಕೆ ತೆರಳಿದರು.**

# ಶ್ರೀಪದ್ಮನಾಭತೀರ್ಥರು

| | | |
|---|---|---|
| ಹೆಸರು | : | ಶ್ರೀಶೋಭನಭಟ್ಟರು |
| ಮೂಲರೂಪ | : | ಶ್ರೀಶೇಷದೇವರು |
| ಆಶ್ರಮ ಗುರುಗಳು | : | ಶ್ರೀಮನ್ಮಧ್ವಾಚಾರ್ಯರು |

ಗ್ರಂಥಗಳು
ಆನಂದಮಾಲಾ, ಸನ್ನ್ಯಾಯರತ್ನಾವಳೀ, ಸತ್ತರ್ಕದೀಪಾವಳೀ.

ಆಶ್ರಮ ಶಿಷ್ಯರು
ಶ್ರೀಲಕ್ಷ್ಮೀಧರತೀರ್ಥರಿಗೆ ಆಶ್ರಮ ಕೊಟ್ಟು ತಮಗೆ ಶ್ರೀಮದಾಚಾರ್ಯರಿಂದ ಕೊಡಲ್ಪಟ್ಟ ಶ್ರೀಗೋಪೀನಾಥದೇವರನ್ನು ಕೊಟ್ಟು ಅನುಗ್ರಹಿಸಿದರು. ಆ ಪರಂಪರೆಯು ಇಂದಿಗೂ ನಡೆದು ಬಂದು ಶ್ರೀಶ್ರೀಪಾದರಾಜಮಠವೆಂದು ಪ್ರಖ್ಯಾತವಾಗಿದೆ.
ಶ್ರೀಮದಾಚಾರ್ಯರ ಆದೇಶದಂತೆ ಶ್ರೀನರಹರಿತೀರ್ಥರಿಗೆ ವೇದಾಂತ ಸಾಮ್ರಾಜ್ಯವನ್ನು ಒಪ್ಪಿಸಿಕೊಟ್ಟರು.

| | | |
|---|---|---|
| ಆರಾಧನೆ | : | ಕಾರ್ತೀಕ ಬಹುಳ ಚತುರ್ದಶೀ |
| ಬೃಂದಾವನ ಸ್ಥಳ | : | ಆನೇಗೊಂದಿ |

**ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವಪೂರ್ವಕಮ್ ।**
**ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯಯೋಗಿನೇ ॥**

# ಶ್ರೀನರಹರಿತೀರ್ಥರು

ಹೆಸರು : ಶ್ರೀಶ್ಯಾಮ ಶಾಸ್ತ್ರಿಗಳು

ಆಶ್ರಮ ಗುರುಗಳು : ಶ್ರೀಮನ್ಮಧ್ವಾಚಾರ್ಯರು

ಗ್ರಂಥಗಳು
ಯಮಕಭಾರತವ್ಯಾಖ್ಯಾನ, ಸೂತ್ರಭಾಷ್ಯ ಮತ್ತು ದಶೋಪನಿಷತ್ತುಗಳಿಗೆ ಟಿಕೆಗಳು

ಕನ್ನಡ ಹರಿದಾಸ ಸಾಹಿತ್ಯ ಸಂಸ್ಥಾಪಕರು

ಶ್ರೀಮದಾಚಾರ್ಯರ ಆದೇಶದಂತೆ ಶ್ರೀಮಾಧವತೀರ್ಥರಿಗೆ ವೇದಾಂತ ಸಾಮ್ರಾಜ್ಯವನ್ನು ಒಪ್ಪಿಸಿಕೊಟ್ಟರು.

ಆರಾಧನೆ : ಪುಷ್ಯ ಬಹುಳ ಸಪ್ತಮೀ

ಬೃಂದಾವನ ಸ್ಥಳ : ಹಂಪಿ

**ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ ।**
**ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿಭಿಕ್ಷವೇ ॥**

# ಶ್ರೀಮಾಧವತೀರ್ಥರು

ಹೆಸರು : ಶ್ರೀಗೋವಿಂದಶಾಸ್ತ್ರಿಗಳು

ಆಶ್ರಮ ಗುರುಗಳು : ಶ್ರೀಮನ್ಮಧ್ವಾಚಾರ್ಯರು

ಗ್ರಂಥಗಳು
ಋಗ್ವೇದ, ಯಜುರ್ವೇದ, ಸಾಮವೇದ ವ್ಯಾಖ್ಯಾನ

ಆಶ್ರಮ ಶಿಷ್ಯರು
ಶ್ರೀಮಧುಹರಿತೀರ್ಥರಿಗೆ ಆಶ್ರಮವನ್ನು ಕೊಟ್ಟು ತಮಗೆ ಶ್ರೀಮದಾಚಾರ್ಯರು ನೀಡಿದ ಶ್ರೀವೀರರಾಮದೇವರನ್ನು ಅನುಗ್ರಹಿದರು. ಆ ಪರಂಪರೆಯೇ ಇಂದು ತಂಬಿಹಳ್ಳಿಮಠವೆಂದು ಪ್ರಸಿದ್ಧಿಯಾಗಿದೆ. ಶ್ರೀಮದಾಚಾರ್ಯರ ಆದೇಶದಂತೆ ಶ್ರೀಅಕ್ಷೋಭ್ಯತೀರ್ಥರಿಗೆ ವೇದಾಂತ ಸಾಮ್ರಾಜ್ಯವನ್ನು ಒಪ್ಪಿಸಿಕೊಟ್ಟರು.

ಆರಾಧನೆ : ಭಾದ್ರಪದ ಬಹುಳ ಅಮಾವಾಸ್ಯ

**ಸಾಧಿತಾಖಿಲಸತ್ತತ್ತ್ವಂ ಬಾಧಿತಾಖಿಲದುರ್ಮತಮ್ ।**
**ಬೋಧಿತಾಖಿಲಸನ್ಮಾರ್ಗಂ ಮಾಧವಾಖ್ಯ ಯತಿಂಭಜೇ ॥**

# ಶ್ರೀಅಕ್ಷೋಭ್ಯತೀರ್ಥರು

ಹೆಸರು : ಶ್ರೀಗೋವಿಂದಶಾಸ್ತ್ರಿಗಳು

ಆಶ್ರಮ ಗುರುಗಳು : ಶ್ರೀಮನ್ಮಧ್ವಾಚಾರ್ಯರು

ಗ್ರಂಥಗಳು
ಋಗ್ವೇದ, ಯಜುರ್ವೇದ, ಸಾಮವೇದ ವ್ಯಾಖ್ಯಾನ

ಆಶ್ರಮ ಶಿಷ್ಯರು
ಶ್ರೀಮಧುಹರಿತೀರ್ಥರಿಗೆ ಆಶ್ರಮವನ್ನು ಕೊಟ್ಟು ತಮಗೆ ಶ್ರೀಮದಾಚಾರ್ಯರು ನೀಡಿದ ಶ್ರೀವೀರರಾಮದೇವರನ್ನು ಅನುಗ್ರಹಿದರು. ಆ ಪರಂಪರೆಯೇ ಇಂದು ತಂಬಿಹಳ್ಳಿಮಠವೆಂದು ಪ್ರಸಿದ್ಧಿಯಾಗಿದೆ. ಶ್ರೀಮದಾಚಾರ್ಯರ ಆದೇಶದಂತೆ ಶ್ರೀಅಕ್ಷೋಭ್ಯತೀರ್ಥರಿಗೆ ವೇದಾಂತ ಸಾಮ್ರಾಜ್ಯವನ್ನು ಒಪ್ಪಿಸಿಕೊಟ್ಟರು.

ಆರಾಧನೆ : ಭಾದ್ರಪದ ಬಹುಳ ಅಮಾವಾಸ್ಯ

**ಯೋವಿದ್ಯಾರಣ್ಯವಿಪಿನಂ ತತ್ತ್ವಮಸ್ಯಸಿನಾಽಚ್ಛಿನತ್ ।**
**ಶ್ರೀಮದಕ್ಷೋಭ್ಯತೀರ್ಥಾಯ ನಮಸ್ತಸ್ಮೈ ಮಹಾತ್ಮನೇ ॥**

# ಶ್ರೀಜಯತೀರ್ಥರು

| | | |
|---|---|---|
| ಪೂರ್ವಾಶ್ರಮದ ಹೆಸರು | : | ಶ್ರೀಧೋಂಡೂರಾಯರು |
| ತಂದೆ | : | ಶ್ರೀರಘುನಾಥರಾಯರು |
| ತಾಯಿ | : | ರುಕುಮಾಬಾಯಿ |
| ಅವತಾರ ಕ್ಷೇತ್ರ | : | ಮಂಗಳವೇಢೆ |
| ಆಶ್ರಮ ಗುರುಗಳು | : | ಶ್ರೀಅಕ್ಷೋಭ್ಯತೀರ್ಥರು |
| ಮೂಲರೂಪ | : | ಸಾಕ್ಷಾತ್ ಇಂದ್ರದೇವರು |
| ಆಶ್ರಮ ಶಿಷ್ಯರು | : | ಶ್ರೀವಿದ್ಯಾಧಿರಾಜರು |

ಟೀಕಾ ಗ್ರಂಥಗಳು
ತತ್ತ್ವಪ್ರಕಾಶಿಕಾ, ಸುಧಾ, ನ್ಯಾಯವಿವರಣೆ, ಪ್ರಮೇಯದೀಪಿಕಾ, ನ್ಯಾಯದೀಪಿಕಾ, ತತ್ತ್ವಸಂಖ್ಯಾನಟೀಕಾ, ತತ್ತ್ವವಿವೇಕಟೀಕಾ, ಉಪಾಧಿಖಂಡನಟೀಕಾ, ಮಾಯಾವಾದಖಂಡನಟೀಕಾ, ಮಿಥ್ಯಾತ್ವಾನುಮಾನಖಂಡನಟೀಕಾ, ತತ್ತ್ವನಿರ್ಣಯಟೀಕಾ, ಕಥಾಲಕ್ಷಣಟೀಕಾ, ತತ್ತ್ವೋದ್ಯೋತಟೀಕಾ, ಕರ್ಮನಿರ್ಣಯಟೀಕಾ, ಷಟ್ಪ್ರಶ್ನಭಾಷ್ಯಾಟೀಕಾ, ಈಶಾವಾಸ್ಯಭಾಷ್ಯಟೀಕಾ, ಋಗ್ಭಾಷ್ಯಟೀಕಾ.

ಸ್ವತಂತ್ರ ಗ್ರಂಥಗಳು
ಪ್ರಮಾಣಪದ್ಧತಿ, ವಾದಾವಲೀ, ಪದ್ಯಮಾಲಾ

ಆರಾಧನೆ : ಆಷಾಢ ಬಹುಳ ಪಂಚಮೀ

**ಯಸ್ಯವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ಪ್ರಯಚ್ಛತಿ ।**
**ಸೇವೇತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥**

# ಶ್ರೀವಿದ್ಯಾಧಿರಾಜರು

ಪೂರ್ವಾಶ್ರಮದ ಹೆಸರು : ಶ್ರೀಕೃಷ್ಣಭಟ್ಟರು
ಆಶ್ರಮ ಗುರುಗಳು : ಶ್ರೀಜಯತೀರ್ಥರು
ಆಶ್ರಮ ಶಿಷ್ಯರು
ಶ್ರೀರಾಜೇಂದ್ರ ತೀರ್ಥರು (ಮುಂದೆ ಶ್ರೀವ್ಯಾಸರಾಜಮಠವೆಂದು ಖ್ಯಾತವಾಯಿತು)
ಶ್ರೀಕವೀಂದ್ರತೀರ್ಥರು (ಮುಂದೆ ಶ್ರೀರಾಘವೇಂದ್ರಮಠವೆಂದು ಖ್ಯಾತವಾಯಿತು)

ಆರಾಧನೆ : ವೈಶಾಖ ಶುದ್ಧ ತೃತೀಯಾ

**ಮಾದ್ವದದ್ವೈತ್ಯಂಧಕಾರಪ್ರದ್ಯೋತನಮಹರ್ನಿಶಂ ।**
**ವಿದ್ಯಾಧಿರಾಜಂ ಸುಗುರುಂ ಹೃದ್ಯಾಮಿತಗುರುಂಭಜೇ ॥**

# ಶ್ರೀಕವೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವಾಸುದೇವಶಾಸ್ತ್ರಿಗಳು
ಆಶ್ರಮ ಗುರುಗಳು : ಶ್ರೀವಿದ್ಯಾಧಿರಾಜರು
ಆಶ್ರಮ ಶಿಷ್ಯರು : ಶ್ರೀವಾಗೀಶತೀರ್ಥರು

ಆರಾಧನೆ : ಚೈತ್ರ ಶುದ್ಧ ನವಮೀ

**ವೀಂದ್ರರೂಢಪದಾಸಕ್ತಂ ರಾಜೇಂದ್ರಮುನಿಸೇವಿತಂ ।**
**ಶ್ರೀಕವೀಂದ್ರಮುನಿಂ ವಂದ್ಯೇ ಭಜತಾಂ ಚಂದ್ರಸನ್ನಿಭಮ್ ॥**

# ಶ್ರೀವಾಗೀಶತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀರಘುನಾಥಾಚಾರ್ಯ
ಆಶ್ರಮ ಗುರುಗಳು : ಶ್ರೀಕವೀಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀರಾಮಚಂದ್ರತೀರ್ಥರು

ಆರಾಧನೆ : ಚೈತ್ರ ಬಹುಳ ತೃತೀಯಾ

**ವಾಸುದೇವಪದದ್ವಂದ ವಾರಿಜಾಸಕ್ತಮಾನಸಂ ।**
**ಪದವ್ಯಾಖ್ಯಾನಕುಶಲಂ ವಾಗೀಶಯತಿಮಾಶ್ರಯೇ ॥**

# ಶ್ರೀರಾಮಚಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಮಾಧವಶಾಸ್ತ್ರಿಗಳು
ಆಶ್ರಮ ಗುರುಗಳು : ಶ್ರೀವಾಗೀಶತೀರ್ಥರು
ಆಶ್ರಮ ಶಿಷ್ಯರು : ಶ್ರೀವಿಬುಧೇಂದ್ರತೀರ್ಥರು

ಆರಾಧನೆ : ವೈಶಾಖ ಶುದ್ಧ ಷಷ್ಠೀ

**ದ್ಯುಮಣ್ಯಭಿಜನಾಬ್ಧೀಂದೂ ರಾಮವ್ಯಾಸಪದಾರ್ಚಕಃ ।**
**ರಾಮಚಂದ್ರಗುರೂರ್ಭೂಯಾತ್ಕಾಮಿತಾರ್ಥಪ್ರದಾಯಕ ಃ ॥**

# ಶ್ರೀವಿಬುಧೇಂದ್ರತೀರ್ಥರು

| | | |
|---|---|---|
| ಪೂರ್ವಾಶ್ರಮದ ಹೆಸರು | : | ಶ್ರೀರಘುನಾಥಭಟ್ಟರು |
| ಆಶ್ರಮ ಗುರುಗಳು | : | ಶ್ರಿರಾಮಚಂದ್ರತೀರ್ಥರು |
| ಆಶ್ರಮ ಶಿಷ್ಯರು | : | ಶ್ರೀಜಿತಾಮಿತ್ರತೀರ್ಥರು |
| ವಿದ್ಯಾಶಿಷ್ಯರು | : | ಶ್ರೀಶ್ರೀಪಾದರಾಜರು |

ಆರಾಧನೆ : ಮಾರ್ಗಶಿರ ಶುದ್ಧ ದಶಮೀ

**ಆಕೇರಲಂ ತಥಾಽಸೇತುಮಾಗಂಗಂ ಚಾ ಹಿಮಾಲಯಂ ।**
**ನಿರಾಕೃತಾದ್ವೈತಶೈವಂ ವಿಬುಧೇಂದ್ರಗುರುಂಭಜೇ ॥**

# ಶ್ರೀಜಿತಾಮಿತ್ರರು

| | | |
|---|---|---|
| ಪೂರ್ವಾಶ್ರಮದ ಹೆಸರು | : | ಶ್ರೀಅನಂತಪ್ಪ |
| ಆಶ್ರಮ ಗುರುಗಳು | : | ಶ್ರಿವಿಬುಧೇಂದ್ರತೀರ್ಥರು |
| ಆಶ್ರಮ ಶಿಷ್ಯರು | : | ಶ್ರೀರಘುನಂದನತೀರ್ಥರು |

ಆರಾಧನೆ : ಮಾರ್ಗಶಿರ ಬಹುಳ ಅಮಾವಾಸ್ಯೆ

**ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಂ ।**
**ಜಿತಾಮಿತ್ರ ಗುರುಂವಂದೇ ವಿಬುಧೇಂದ್ರಕರೋದ್ಭವಂ ॥**

# ಶ್ರೀರಘುನಂದನತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀರಾಮಚಂದ್ರಾಚಾರ್ಯರು
ಆಶ್ರಮ ಗುರುಗಳು : ಶ್ರೀಜಿತಾಮಿತ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುರೇಂದ್ರತೀರ್ಥರು

ಆರಾಧನೆ : ಕಾರ್ತೀಕ ಬಹುಳ ಅಷ್ಟಮೀ

**ಪರ್ರೈರಪಹೃತಾಮೂಲರಾಮಾರ್ಚಾಗುರ್ವನುಗ್ರಹಾತ್ ।**
**ಯೇನಾನೀತಾನಮಸ್ತಸ್ಮೈ ರಘುನಂದನಬಿಕ್ಷವೇ ॥**

# ಶ್ರೀಸುರೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವೆಂಕಟಕೃಷ್ಣಾಚಾರ್ಯರು
ಆಶ್ರಮ ಗುರುಗಳು : ಶ್ರೀರಘುನಂದನತೀರ್ಥರು

ಶಿಷ್ಯಸ್ವೀಕಾರ
ಶ್ರೀಸುರೇಂದ್ರತೀರ್ಥರು ಶ್ರೀವಿಷ್ಣುತೀರ್ಥರಿಗೆ ವಿಧಿಪೂರ್ವಕವಾಗಿ ದಂಡಪಲ್ಲಟದೊಂದಿಗೆ ಮಂತ್ರೋಪದೇಶ ಮಾಡಿ ತಮ್ಮ ಪರಂಪರೆಗೆ ತೆಗೆದುಕೊಂಡು ತಮ್ಮ ಸಂಸ್ಥಾನದಲ್ಲಿ ಪಟ್ಟಾಭಿಷೇಕ ಮಾಡಿ ಶ್ರೀವಿಜಯೀಂದ್ರತೀರ್ಥರು ಎಂದು ನಾಮಕರಣ ಮಾಡಿದರು ಮತ್ತು ಮಹಾಸಂಸ್ಥಾನದ ಜವಾಬ್ದಾರಿಯನ್ನು ಒಪ್ಪಿಸಿದರು.

## ಆಶ್ರಮ ಶಿಷ್ಯರು

### ಶ್ರೀಸುಧೀಂದ್ರತೀರ್ಥರು

ಕುಂಭಕೋಣದ ವಿದ್ಯಾಮಠದಲ್ಲಿ ಇಂದು ಎಂದೂ ಯಾರು ಕಂಡೂ ಕಾಣದರಿಯದಂತಹಾ ಸಂಭ್ರಮ. ಸಾವಿರಾರು ಧಾರ್ಮಿಕರು ಸೇರಿದ್ದಾರೆ. ತಂಜಾಪುರಾಧೀಶ ಚವ್ವಪ್ಪನಾಯಕನ ತಮ್ಮನೂ, ರಾಜಮನ್ನಾರಗುಡಿಯ ಅಧಿಪತಿಯೂ ಆದ ಚಿನ್ನ ಚವ್ವಪ್ಪನಾಯಕನು ಮಿತಪರಿವಾರನಾಗಿ ಬಂದಿದ್ದಾನೆ. ಇಂದು ಶ್ರೀಸುರೇಂದ್ರತೀರ್ಥರು ಪ್ರಿಯಶಿಷ್ಯರಾದ ಶ್ರೀವಿಜಯೀಂದ್ರತೀರ್ಥರ ಉತ್ತರಾಧಿಕಾರಿಯನ್ನಾರಿಸಿ ಆಶ್ರಮಪ್ರಧಾನ ಮಾಡಲಿರುವುದೇ ಇಷ್ಟೊಂದು ಸಂಭ್ರಮಕ್ಕೆ ಕಾರಣವಾಗಿದೆ. ಭವ್ಯ ವೇದಿಕೆಯ ಮೇಲೆ ಶ್ರೀಸುರೇಂದ್ರತೀರ್ಥರು ಮತ್ತೂ ಶ್ರೀವಿಜಯೀಂದ್ರತೀರ್ಥರು ಭದ್ರಾಸನದಲ್ಲಿ ಮಂಡಿಸಿದ್ದಾರೆ. ಚಿನ್ನ ಚವ್ವಪ್ಪನಾಯಕ ಮತ್ತಿತರ ರಾಜ್ಯ ಪ್ರಮುಖರೂ ವಿಹಿತಾಸನದಲ್ಲಿ ಮಂಡಿಸಿದ್ದಾರೆ.

ಆಗ ಶ್ರೀವಿಜಯೀಂದ್ರತೀರ್ಥರು ತಮ್ಮ ಮಹಾಸಂಸ್ಥಾನದ ಮಹತ್ವ, ಭವ್ಯಪರಂಪರೆ ಮುಂತಾದ ವಿಚಾರಗಳನ್ನು ತಿಳಿಸಿ ಸಭೆಯನ್ನು ಕುರಿತು " ಧರ್ಮಾಭಿಮಾನಿಗಳೇ ಶ್ರೀಮದಾಚಾರ್ಯರಿಂದ ಅವಿಚ್ಛಿನ್ನವಾಗಿ ಈ ಮಹಾಪೀಠದಲ್ಲಿ ನಡೆದು ಬಂದಿರುವ ಆಶ್ರಮ ಪ್ರಧಾನ ಸಂಪ್ರದಾಯಕ್ಕೆ ವಿಚ್ಛಿತ್ತಿಯುಂಟಾಗುವ ಭಯವಿತ್ತು. ಏಕೆಂದರೆ ಶ್ರೀಮೂಲರಾಮನ ಶ್ರೀಮದಾಚಾರ್ಯರ ಪ್ರೇರಣೆಯಂತೆ ಶ್ರೀವ್ಯಾಸರಾಜ ಗುರುಸಾರ್ವಭೌಮರಿಂದ ಸನ್ಯಸ್ತರಾಗಿ ಸಕಲ ಶಾಸ್ತ್ರಾಧ್ಯಯನ ಮಾಡಿದ್ದ ನಾವು ಶ್ರೀಸುರೇಂದ್ರತೀರ್ಥ ಗುರುಪಾದ್ಯರಿಗೆ ಶಿಷ್ಯರಾಗಿ ಶ್ರೀವ್ಯಾಸರಾಜಗುರುಪಾದರಿಂದ ಕೊಡಲ್ಪಟ್ಟು, ದಂಡಪಲ್ಲಟ – ಮಂತ್ರಮುದ್ರಾಧಾರಣ, ಗುರುಪದೇಶ, ಮಹಾಮಂತ್ರೋಪದೇಶ – ವೇದಾಂತ ವಿದ್ಯಾ ಸಾಮ್ರಾಜ್ಯ ಪಟ್ಟಾಭಿಶೇಕ ದ್ವಾರಾ ನಾವು ಈ ಮಹಾ ಸಂಸ್ಥಾನದ ಅಧಿಪತಿಗಳಾಗಿ ಬಂದಿದ್ದರಿಂದ ಪರಂಪರಾ ಪ್ರಾಪ್ತ ಆಶ್ರಮ ಪ್ರಧಾನ ಸಂಪ್ರಾದಾಯಕ್ಕೆ ವಿಚ್ಛಿತ್ತಿ ಬಂದು ಆ ಅಪವಾದವು ನಮಗುಂಟಾದೀತೆಂಬ ಭಯ, ನಮ್ಮ ಪೂಜ್ಯ ಗುರುಪಾದರಿಗೆ ಉಂಟಾಗಬಾರದೆಂದು ನಾವು ಬಹುವಿಧವಾಗಿ ಗುರುವರ್ಯರನ್ನು ಇಂದು ನಮ್ಮ ಮುಂದಿನ ಉತ್ತರಾಧಿಕಾರಿಗಳ ಘೋಷಣೆಗಳೊಡನೆ ಆಶ್ರಮ ಪ್ರಧಾನ ಮಾಡಿ ಅವಿಚ್ಛಿನ್ನವಾಗಿ ನಡೆದು ಬಂದ ಸತ್ಸಂಪ್ರದಾಯವನ್ನು

ಪರಿಪಾಲಿಸಬೇಕೆಂದು ಪ್ರಾರ್ಥಿಸಿ ಒಪ್ಪಿಸಿದ್ದೇವೆ. ಈಗ ನಮ್ಮ ಗುರುವರ್ಯರು ನಮ್ಮ ಮುಂದಿನ ಉತ್ತರಾಧಿಕಾರಿಗಳಿಗೆ ಆಶ್ರಮ ಪ್ರದಾನ ಮಾಡುತ್ತಾರೆ. ಆ ಭಾಗ್ಯವಂತರಾರೆಂದು ನೀವೆಲ್ಲರೂ ಯೋಚಿಸುತ್ತಿರಬಹುದು. ಇಕೋ ನೋಡಿ ನಮ್ಮ ಪಕ್ಕದಲ್ಲಿ ಕುಳಿತಿರುವವರೇ ಆ ಮಹನೀಯರು. ನಮ್ಮ ವಂಶದ ಮತ್ತು ಪೂರ್ವಾಶ್ರಮದ ಸೋದರ ಸೊಸೆಯ ( ಚಿನ್ನ ಭಂಡಾರಿ ಮನೆತನದ ) ಪೌತ್ರರಿವರು. ನ್ಯಾಯ–ಸಾಹಿತ್ಯಾದಿ ಶಾಸ್ತ್ರಗಳಲ್ಲಿ ಪರಿಣಿತರಾದ ಈ ನಾರಾಯಣಾಚಾರ್ಯರೇ ಈ ಮಹಾಪೀಠವನ್ನಲಂಕರಿಸಲು ಅರ್ಹರಾಗಿದ್ದಾರೆ. ಈಗ ಪರಮಪೂಜ್ಯ ಗುರುವರ್ಯರು ಪರಮಹಂಸಾಶ್ರಮ ಸ್ವೀಕಾರಕ್ಕೆ ಶ್ರೀನಾರಾಯಣಾಚಾರ್ಯರಿಗೆ ಫಲಮಂತ್ರಾಕ್ಷತಾ ಅನುಗ್ರಹಿಸುತ್ತಾರೆ " ಎಂದು ನಿರೂಪಿಸಿದರು. ಸರ್ವರೂ ಕರತಾಡನದೊಂದಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ತರುವಾಯ ಶ್ರೀಸುರೇಂದ್ರತೀರ್ಥರು ಮಂಗಳವಾದ್ಯ, ಭೇರಿ, ನಗಾರಿ ಮೊಳಗುತ್ತಿರಲು ಶ್ರೀನಾರಾಯಣಾಚಾರ್ಯರನ್ನು ಶ್ರೀವಿಜಯೀಂದ್ರತೀರ್ಥರ ಉತ್ತರಾಧಿಕಾರಿಗಳೆಂದು ಘೋಷಿಸಿ ಪರಮಹಂಸಾಶ್ರಮ ಸ್ವೀಕಾರಕ್ಕೆ ಫಲಮಂತ್ರಾಕ್ಷತೆ ಅನುಗ್ರಹಿಸಿದರು.

ಶ್ರೀಶಾಲಿವಾಹನಶಕೆ 1497ನೇ ( ಕ್ರಿ.ಶ. 1575 ) ಯುವ ನಾಮ ಸಂವತ್ಸರದ ಚೈತ್ರ ಶುಕ್ಲ ಚತುರ್ದಶೀ ಶುಭದಿನದಂದು ಸನ್ಯಾಸಾಶ್ರಮವನ್ನು ಸ್ವೀಕರಿಸಿ, ಕಾಷಾಯಾಂಬರ , ದಂಡಕಮಂಡಲಧಾರಿಗಳಾಗಿ ಬಂದು ಶ್ರೀಸುರೇಂದ್ರತೀರ್ಥರಿಗೂ, ಶ್ರೀವಿಜಯೀಂದ್ರತೀರ್ಥರಿಗೂ ಪಾದಪೂಜೆ ಮಾಡಿ ವಿನೀತರಾಗಿ ನಿಂತಿರುವ ನೂತನ ಯತಿಗಳಿಗೆ ಶ್ರೀಸುರೇಂದ್ರತೀರ್ಥರು ಮಂತ್ರಮುದ್ರಾಧಾರಣ, ಗುರೂಪದೇಶ, ಮಹಾಮಂತ್ರೋಪದೇಶ, ಚತುಃಷಷ್ಟಿ ಕಲೆಗಳ ಉಪದೇಶವಗಳನ್ನು ಮಾಡಿ ಅವರನ್ನು ಸಿದ್ಧವಾಗಿರುವ ಭದ್ರಾಸನದಲ್ಲಿ ಮಂಡಿಸಿ, ಸಕಲ ಮಂಗಳವಾದ್ಯ, ಜಯಘೋಷ ವೇದಘೋಷಗಳಾಗುತ್ತಿರಲು ಶ್ರೀಮದಾಚಾರ್ಯರ ಮಹಾಸಂಸ್ಥಾನಾಧಿಪತಿಗಳೆಂದು ವೇದಾಂತ ವಿದ್ಯಾ ಸಾಮ್ರಾಜ್ಯ ಪಟ್ಟಾಭಿಷೇಕ ಮಾಡಿ "ಶ್ರೀಸುಧೀಂದ್ರತೀರ್ಥರು" ಎಂಬ ಅಭಿಧಾನದಿಂದ ಅನುಗ್ರಹಿಸಿ ಅವರ ಕರವನ್ನು ಶ್ರೀವಿಜಯೀಂದ್ರ ತೀರ್ಥರ ಕರದಲ್ಲಿಟ್ಟು ನೂತನ ಜಗದ್ಗುರುಗಳ ಸಮಸ್ತ ಭಾರವನ್ನೂ ಅವರಿಗೆ ವಹಿಸಿಕೊಟ್ಟು ಕೃತಾರ್ಥರಾದರು.

“ ಸುರೇಂದ್ರಃ ಸಾಂಪ್ರದಾಯಾಪ್ತನ್ಯಾಸವಿಚ್ಛೇದ ಭೀರುಕಃ ।
ಸುಧೀಂದ್ರಂ ನ್ಯಾಸಯಿತ್ವಾ ತ್ವಂ ವಿಜಯೀಂದ್ರಕರೇ ದದೌ ॥
ಆಚಾರ್ಯಗತಿಕ್ರಮ

ಆಗ ಶ್ರೀವಿಜಯೀಂದ್ರತೀರ್ಥರು ಶ್ರೀಸುರೇಂದ್ರತೀರ್ಥರಿಗೆ ನಮಸ್ಕರಿಸಿ “ನಮ್ಮ ಪ್ರಿಯ ಶಿಷ್ಯರಾದ ಶ್ರೀಸುಧೀಂದ್ರತೀರ್ಥರು ಜಗದ್ವಿಖ್ಯಾತಪಂಡಿತರಾಗಿ, ಪರವಾದಿದಿಗ್ವಿಜಯ, ಸಿದ್ಧಾಂತ ಸ್ಥಾಪನೆ, ಪಾಠಪ್ರವಚನ, ಗ್ರಂಥರಚನೆ, ಶಿಷ್ಯಜನೋದ್ಧಾರಾದಿ ಕಾರ್ಯಾಸಕ್ತರಾಗಿ ಮಹಾ ಸಂಸ್ಥಾಣದ ಕೀರ್ತಿ ಪತಾಕೆಯನ್ನು ಜಗತ್ತಿನಲ್ಲೆಲ್ಲಾ ಮೆರೆಸಿ ಕೀರ್ತಿಗಳಿಸುವಂತೆ ನಾವು ಮಾಡುತ್ತೇವೆ” ಎಂದು ಗುರುಗಳಿಗೆ ಭರವಸೆಯನ್ನು ನೀಡಿದರು. ಸರ್ವರೂ ಈ ಗುರುಶಿಷ್ಯರನ್ನು ಶ್ಲಾಘಿಸಿದರು.

ಆನಂತರ ಶ್ರೀವಿಜಯೀಂದ್ರತೀರ್ಥರ ಆದೇಶದಂತೆ ಶ್ರೀಸುಧೀಂದ್ರತೀರ್ಥರು ಸಂಸ್ಕೃತದಲ್ಲಿ ವಿದ್ವತ್ಪೂರ್ಣ ಉಪದೇಶವನ್ನು ಮಾಡಿ ಸರ್ವರನ್ನೂ ಆನಂದಪಡಿಸಿದರು.

ಆರಾಧನೆ : ಪುಷ್ಯ ಶುದ್ಧ ದ್ವಾದಶೀ

ಯಶ್ಚಕಾರೋಪವಾಸೇನ ತ್ರಿವಾರಂ ಭೂಪ್ರದಕ್ಷಿಣಂ ।
ತಸ್ಮೈ ನಮೋ ಯತೀಂದ್ರಾಯ ಶ್ರೀಸುರೇಂದ್ರತಪಸ್ವಿನೇ ॥

# ಶ್ರೀವಿಜಯೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವಿಠಲಾಚಾರ್ಯರು

ಆಶ್ರಮ ಗುರುಗಳು

ಶ್ರೀವ್ಯಾಸರಾಜರಿಂದ ಆಶ್ರಮ ಸ್ವೀಕಾರ ಮಾಡಿ ಶ್ರೀವಿಷ್ಣುತೀರ್ಥರಾಗಿ ಅವರಿಂದ ಸಕಲ ಶಾಸ್ತ್ರ, ವೇದ, ವೇದಾಂತ, ಉಪನಿಷತ್, ಪುರಾಣ ಇತ್ಯಾದಿಗಳನ್ನು ಕಲಿತು ಗುರುವಿಗೆ ತಕ್ಕ ಶಿಷ್ಯರಾದರು. ಮುಂದೆ ಶ್ರೀವಿಷ್ಣುತೀರ್ಥರನ್ನು ಶ್ರೀವ್ಯಾಸರಾಜರಿಂದ ಶ್ರೀಸುರೇಂದ್ರತೀರ್ಥರು ತಮ್ಮ ಸಂಸ್ಥಾನದ ಪರಂಪರೆಗೆ ತೆಗೆದುಕೊಂಡು ಪಟ್ಟಾಭಿಷೇಕ ಮಾಡಿ ಶ್ರೀವಿಜಯೀಂದ್ರತೀರ್ಥರೆಂದು ನಾಮಕರಣ ಮಾಡಿ ಮಹಾಸಂಸ್ಥಾನದ ಜವಾಬ್ದಾರಿಯನ್ನು ಒಪ್ಪಿಸಿದರು.

ವಿದ್ಯಾಶಿಷ್ಯರು : ಶ್ರೀಸುಧೀಂದ್ರತೀರ್ಥರು

ಸಮಕಾಲೀನರು

ಶ್ರೀವಾದಿರಾಜರು, ಶ್ರೀಶ್ರೀನಿವಾಸತೀರ್ಥರು, ಶ್ರೀಕನಕ–ಪುರಂದರದಾಸರು, ಶ್ರೀಅಪ್ಪಯ್ಯದೀಕ್ಷಿತರು ಹಾಗೂ 20ಕ್ಕೂ ಅಧಿಕ ಶ್ರೀವ್ಯಾಸರಾಜರಿಂದ ಸಂನ್ಯಾಸ ಸ್ವೀಕರಿಸಿದ ಸಂನ್ಯಾಸೀ ಶಿಷ್ಯರು.

ಗ್ರಂಥಗಳು

ಶ್ರೀಮದಾಚಾರ್ಯರ ಮತ್ತು ಶ್ರೀಜಯತೀರ್ಥರ ಎಲ್ಲಾ ಗ್ರಂಥಗಳಿಗೆ ವ್ಯಾಖ್ಯಾನ, ಟೀಕಾ_ಟಿಪ್ಪಣಿಗಳನ್ನು ಬರೆದು ಜೊತೆಯಲ್ಲಿ ಸ್ವತಂತ್ರವಾಗಿ 104 ಉದ್ಗ್ರಂಥಗಳನ್ನು ರಚಿಸಿ ಮಹದುಪಕಾರ ಮಾಡಿದ್ದಾರೆ.

ಆರಾಧನೆ : ಜೇಷ್ಟ ಬಹುಳ ತ್ರಯೋದಶೀ

**ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ ।**
**ನಮತಾಂ ಕಲ್ಪತರವೇ ಜಯೀಂದ್ರಗುರವೇ ನಮಃ ॥**

# ಶ್ರೀಸುಧೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀನಾರಾಯಣಾಚಾರ್ಯರು

ಆಶ್ರಮ ಗುರುಗಳು : ಶ್ರೀಸುರೇಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀರಾಘವೇಂದ್ರತೀರ್ಥರು

ವ್ಯಾಖ್ಯಾನ ಗ್ರಂಥಗಳು
ಸದ್ಯುಕ್ತಿರತ್ನಾಕರ ( ತರ್ಕತಾಂಡವ ವ್ಯಾಖ್ಯಾನ ), ಆಪಸ್ತಂಬ ಸೂತ್ರಪ್ರದೀಪ. ಶ್ರೀಮದ್ಭಾಗವತ ದ್ವಿತೀಯಾ ಮತ್ತು ಏಕಾದಶ ಸ್ಕಂದಗಳಿಗೆ ವ್ಯಾಖ್ಯಾನ

ಸಾಹಿತ್ಯ ಗ್ರಂಥಗಳು
ಸುಭದ್ರಾಪರಿಣಯ ನಾಟಕ, ಶ್ರೀವ್ಯಾಸರಾಜಾಭ್ಯುದಯ, ಅಮೃತಾಪಹರಣ, ದಯಾಲು ಶತಕ, ವೈರಾಗ್ಯತರಂಗ ( ಪದ್ಯ ಕಾವ್ಯ ), ಅಲಂಕಾರ ಮಂಜರೀ, ಅಲಂಕಾರ ನಿಕಷ, ಸಾಹಿತ್ಯ ಸಾಮ್ರಾಜ್ಯ ( ಕೃಷ್ಣಾಧ್ವರಿ ವಿರಚಿತ ರಘುನಾಥ ಭೂಪಾಲೀಯ ವ್ಯಾಖ್ಯೆ )

ಆರಾಧನೆ : ಫಾಲ್ಗುಣ ಬಹುಳ ತೃತೀಯಾ

**ಕುಶಾಗ್ರಮತಿಯೇ ಭಾನುದ್ಯುತಿಯೇ ವಾದಿಬೀತಯೇ ।**
**ಆರಾಧಿತಶ್ರೀಪತಯೇ ಸುಧೀಂದ್ರಯತಯೇ ನಮಃ ॥**

# ಶ್ರೀರಾಘವೇಂದ್ರತೀರ್ಥರು

**ಶಂಖುಕರ್ಣಾಽಖ್ಯದೇವಸ್ತು ಬ್ರಹ್ಮಶಾಪಾಚ್ಚ ಭೂತಲೇ ।**
**ಪ್ರಹ್ಲಾದ ಇತಿ ವಿಖ್ಯಾತೋ ಭೂಭಾರ ಕ್ಷಪಣೇ ರತಃ ॥**
**ಸ ಏವ ರಾಘವೇಂದ್ರಾಖ್ಯ ಯತಿರೂಪೇಣ ಸರ್ವದಾ ।**
**ಕಲೌಯುಗೇ ರಾಮಸೇವಾ ಕುರ್ವನ್ಮಂತ್ರಾಲಯೇಭವತ್ ॥**

ತಾತ್ಪರ್ಯ : ಶ್ರೀಶಂಕುಕರ್ಣರೆಂಬ ಕರ್ಮಜದೇವತೆಗಳು ಶ್ರೀಹರಿಯ ಸಂಕಲ್ಪದಂತೆ ಶ್ರೀಬ್ರಹ್ಮದೇವರ ಶಾಪರೂಪವರದಿಂದ ಭೂಮಿಯಲ್ಲಿ ಅವತರಿಸಿ ಶ್ರೀಪ್ರಹ್ಲಾದರೆಂದು ಖ್ಯಾತರಾದರು. ಅವರು ಭೂಭಾರಹರಣರತರಾದ ಶ್ರೀನರಸಿಂಹದೇವರಲ್ಲಿ ರತರಾದರು. ಅವರೇ ದ್ವಾಪರಯುಗದಲ್ಲಿ ಭೂಭಾರಹರಣಕ್ಕಾಗಿ ಅವತರಿಸಿದ ಶ್ರೀಕೃಷ್ಣನ ಸೇವೆ ಮಾಡಿ ಶ್ರೀಬಾಹ್ಲೀಕರೆಂದು ಖ್ಯಾತರಾದರು. ಮುಂದೆ ಕಲಿಯುಗದಲ್ಲಿ ಶ್ರೀಗೋಪಾಲಕೃಷ್ಣನ ಆರಾಧನೆಗಾಗಿ ಶ್ರೀವ್ಯಾಸರಾಜರಾಗಿ ಅವತರಿಸಿದರು. ಹೀಗೆ ಶ್ರೀಬಾಹ್ಲೀಕ ಮತ್ತು ಶ್ರೀವ್ಯಾಸರಾಜರಾಗಿ ಅವತರಿಸಿದ ಶ್ರೀಪ್ರಹ್ಲಾದರಾಜರೇ ಮತ್ತೇ ಶ್ರೀಮೂಲರಾಮದೇವರ ಪೂಜೆಗಾಗಿ ಶ್ರೀರಾಘವೇಂದ್ರಯತಿಗಳ ಅಭಿದಾನದಿಂದ ಅವತರಿಸಿ ಮಂತ್ರಾಲಯದಲ್ಲಿ ಶ್ರೀಮೂಲರಾಮ ಸೇವಾಸಕ್ತರಾಗಿ ವಿರಾಜಿಸಿರುವರು.

ಹೆಸರು : ವೆಂಕಟನಾಥಾಚಾರ್ಯ

ಅವತಾರ :

ಶ್ರೀಶಾಲಿವಾಹನಶಕೆ 1518ನೇ ( ಕ್ರಿಸ್ತಶಕ 1595 ) ಮನ್ಮಥನಾಮ ಸಂವತ್ಸರ ಫಾಲ್ಗುಣ ಶುದ್ಧ ಸಪ್ತಮೀ ಗುರುವಾರ

ನಕ್ಷತ್ರ : ಮೃಗಶಿರಾ

ವಂಶ : ಷಾಷ್ಟಿಕ ವಂಶದ ಬೀಗಮುದ್ರೆಯ ಮನೆತನದವರು.

ತಂದೆ : ಶ್ರೀವೀಣಾ ತಿಮ್ಮಣ್ಣಭಟ್ಟರು

| | | |
|---|---|---|
| ತಾಯಿ | : | ಗೋಪಿಕಾಂಬ |
| ಅಣ್ಣ | : | ಗುರುರಾಜಾಚಾರ್ಯ |
| ಅಕ್ಕ | : | ವೆಂಕಟಾಂಬ |
| ಭಾವ | : | ಶ್ರೀ ಲಕ್ಷ್ಮೀನರಸಿಂಹಾಚಾರ್ಯ |
| ಸೊದರಳಿಯ | : | ಶ್ರೀನಾರಾಯಣಾಚಾರ್ಯ (ಶ್ರೀರಾಘವೇಂದ್ರ ವಿಜಯ ಗ್ರಂಥಕರ್ತರು) |
| ಧರ್ಮಪತ್ನಿ | : | ಸರಸ್ವತೀಬಾಯಿ |
| ಪೂರ್ವಾಶ್ರಮ ಪುತ್ರರು | : | ವಿದ್ವಾನ್ ಶ್ರೀಲಕ್ಷ್ಮೀನಾರಾಯಣಾಚಾರ್ಯರು |
| ವಿದ್ಯಾ ಗುರುಗಳು | : | ಶ್ರೀಲಕ್ಷ್ಮೀನರಸಿಂಹಾಚಾರ್ಯರು ಮತ್ತು ಶ್ರೀ ಸುಧೀಂದ್ರತೀರ್ಥರು |
| ಆಶ್ರಮ ಗುರುಗಳು | : | ಶ್ರೀ ಸುಧೀಂದ್ರತೀರ್ಥರು |
| ಆಶ್ರಮ ನಾಮ | : | ಶ್ರೀರಾಘವೇಂದ್ರತೀರ್ಥರು |

ವೇದಾಂತಸಾಮ್ರಾಜ್ಯ ಪಟ್ಟಾಭಿಷೇಕ
ಫಾಲ್ಗುಣ ಶುದ್ಧ ದ್ವಿತೀಯ

| | | |
|---|---|---|
| ಆಶ್ರಮ ಶಿಷ್ಯರು | : | ಶ್ರೀಯೋಗೀಂದ್ರತೀರ್ಥರು |
| ಬೃಂದಾವನ ಪ್ರವೇಶ | : | ವಿರೋಧಿಕೃತ್ ಶ್ರಾವಣ ಬಹುಳ ದ್ವಿತೀಯಾ ( ಸಶರೀರ ) |
| ಬೃಂದಾವನ ಸ್ಥಳ | : | ಶ್ರೀಕ್ಷೇತ್ರ ಮಂತ್ರಾಲಯ |
| ಅಂಕಿತ | : | ವೇಣುಗೋಪಾಲ |

## ಗ್ರಂಥಗಳು

ಪರಿಮಳ, ತಂತ್ರದೀಪಿಕಾ, ಭಾವದೀಪಿಕಾ, ತತ್ತ್ವಮಂಜರೀ, ಗೀತಾವಿವೃತ್ತಿ, ಉಪನಿಷದ್ಖಂಡಾರ್ಥಗಳು, ತತ್ತ್ವಸಂಖ್ಯಾನಟೀಕಾ, ಕರ್ಮನಿರ್ಣಯಟೀಕಾ, ಚಂದ್ರಿಕಾಪ್ರಕಾಶ, ನ್ಯಾಯಮುಕ್ತಾವಲೀ, ಪ್ರಾತಃಸಂಕಲ್ಪಗದ್ಯ, ಸರ್ವಸಮರ್ಪಣಗದ್ಯ, ವೇದತ್ರಯವಿವೃತ್ತಿ, ಶ್ರೀರಾಮ ಮತ್ತು ಶ್ರೀಕೃಷ್ಣಚಾರಿತ್ರ್ಯಮಂಜರೀ, ಭಾಷ್ಯಗಳಿಗೆ ಟೀಕಾ_ಟಿಪ್ಪಣಿಗಳನ್ನು ರಚಿಸಿ ದ್ವೈತಮತಕ್ಕೆ ಮಹದುಪಕಾರ ಮಾಡಿದ್ದಾರೆ.

## ಶ್ರೀಮದಪ್ಪಣಾಚಾರ್ಯ ಕೃತ
## ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮ ಧ್ಯಾನ ಶ್ಲೋಕಃ

**ತಪ್ತಕಾಂಚನ ಸಂಕಾಶಂ ಅಕ್ಷಮಾಲಾಂ ಕಮಂಡಲುಂ ।**
**ದೋರ್ಭ್ಯಾಂ ದಧಾನಂ ಕಾಶಾಯವಸನಂ ರಾಮಮಾನಸಮ್ ॥**
**ಯೋಗೀಂದ್ರತೀರ್ಥ ವಂದ್ಯಾಂಘ್ರಿಂ ತುಳಸೀಹಾರಭೂಷಿತಂ ।**
**ಜ್ಞಾನಭಕ್ತಿತಪಃ ಪೂರ್ಣಂ ಧ್ಯಾಯೇದಿಷ್ಟಾರ್ಥ ಸಿದ್ಧಯೇ ॥**

ಕಾದ ಬಂಗಾರದಂತೆ ಶರೀರ ಶೋಭೆಯಿಂದ ರಾಜಿಸುವವರೂ, ಎರಡು ಕರಗಳಲ್ಲಿ ಕಮಲಾಕ್ಷಮಾಲೆ – ಕಮಂಡಲುಗಳನ್ನು ಧರಿಸಿರುವವರೂ, ಕಾಶಾಯಾಂಬರಧಾರಿಗಳೂ, ಮನದಲ್ಲಿ ಶ್ರೀಮೂಲರಾಮ ವಿರಾಜಿತರೂ, ಶ್ರೀಯೋಗೀಂದ್ರತೀರ್ಥರಿಂದ ವಂದಿತ ಪಾದಾಬ್ಜರೂ, ತುಳಸೀಮಣಿಮಾಲೆಗಳಿಂದ ವಿಭೂಷಿತರೂ, ಶ್ರೀಭಗವದ್ಭಕ್ತಿ – ಜ್ಞಾನ – ತಪಸ್ಸುಗಳಿಂದ ಪರಿಪೂರ್ಣರೂ ಆದ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರನ್ನು ಇಷ್ಟಾರ್ಥ ಸಿದ್ಧಿಗಾಗಿ ಧ್ಯಾನಿಸಬೇಕು ಎಂದು ಭಾವ.

# ಶ್ರೀರಾಘವೇಂದ್ರ

ಶ್ರೀರಾಘವೇಂದ್ರ ನಾಮವು ಶ್ರೀರಾಮಚಂದ್ರದೇವರ ದ್ವಾದಶ ನಾಮಗಳಲ್ಲೊಂದು. ಅಂತೆಯೇ ಶ್ರೀರಾಮನ ಸೇವೆಗಾಗಿ ಅವತರಿಸಿ ಬಂದವರೇ ಶ್ರೀರಾಘವೇಂದ್ರತೀರ್ಥರು. ಶ್ರೀರಾಘವೇಂದ್ರ ಎಂದರೆ – " ಅಘಶ್ಚ ವೇಂ ಚ ಅಘವೇಂ, ಅಘವೇಂ ದ್ಯತಿ ರಾತೀತಿ ಅಘವೇಂದ್ರಃ ರಾಜತೇ ಇತಿ ರಃ, ರಶ್ಚಾಸೌ ಅಘವೇಂದ್ರಶ್ಚ ರಾಘವೇಂದ್ರಃ " ಎಂಬ ವ್ಯುತ್ಪತ್ತಿ ಯಿಂದ ಶ್ರೀರಾಘವೇಂದ್ರತೀರ್ಥರು ಭಕ್ತರ ಪಾಪಗಳನ್ನು ಕಳೆದು, ಬೇಡಿಬೇಡಿದ ಇಷ್ಟಾರ್ಥಗಳನ್ನಿತ್ತು ಆನಂದ ಪಡಿಸುತ್ತಾ ವಿರಾಜಿಸುವರು ಎಂದು ಅರ್ಥವಾಗುವುದರಿಂದ ಶ್ರೀರಾಘವೇಂದ್ರನಾಮವು ಅನ್ವರ್ಥಕವಾಗಿದೆ.

**ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯ ಚ ।**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥**

**ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।**
**ಶ್ರೀರಾಘವೇಂದ್ರಗುರವೇ ನಮೋ ಅತ್ಯಂತ ದಯಾಲವೇ ॥**

# ಶ್ರೀಯೋಗೀಂದ್ರತೀರ್ಥರು

| | | |
|---|---|---|
| ಪೂರ್ವಾಶ್ರಮದ ಹೆಸರು | : | ಶ್ರೀವೆಂಕಣ್ಣಾಚಾರ್ಯರು |
| ಆಶ್ರಮ ಗುರುಗಳು | : | ಶ್ರೀರಾಘವೇಂದ್ರತೀರ್ಥರು |
| ಆಶ್ರಮ ಶಿಷ್ಯರು | : | ಶ್ರೀಸೂರೀಂದ್ರತೀರ್ಥರು |
| ಆರಾಧನೆ | : | ಮಾಘ ಶುದ್ಧ ದಶಮೀ |

**ಸಾಂದ್ರಬೋಧಾಯ ಶಾಸ್ತ್ರೇಷು ನಿಸ್ತಂದ್ರಮನಸೇ ಹರೌ ।**
**ರಾಘವೇಂದ್ರಕುಮಾರಾಯ ನಮೋ ಯೋಗೀಂದ್ರಯೋಗಿನೇ ॥**

# ಶ್ರೀಸೂರೀಂದ್ರತೀರ್ಥರು

| | | |
|---|---|---|
| ಪೂರ್ವಾಶ್ರಮದ ಹೆಸರು | : | ಶ್ರೀವಾಸುದೇವಾಚಾರ್ಯರು |
| ಆಶ್ರಮ ಗುರುಗಳು | : | ಶ್ರೀಯೋಗೀಂದ್ರತೀರ್ಥರು |
| ಆಶ್ರಮ ಶಿಷ್ಯರು | : | ಶ್ರೀಸುಮತೀಂದ್ರತೀರ್ಥರು |
| ಆರಾಧನೆ | : | ಜೇಷ್ಠ ಶುದ್ಧ ದ್ವಿತೀಯಾ |

**ರಾಘವೇಂದ್ರಾರ್ಪಿತಧಿಯೇ ಯೋಗೀಂದ್ರಾರ್ಪಿತಸೂನವೇ ।**
**ಶ್ರೀಮತ್ಸೂರೀಂದ್ರಯತಯೇ ಸುತಪೂನಿಧಯೇ ನಮಃ ॥**

# ಶ್ರೀಸುಮತೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಮುದ್ದುಕೃಷ್ಣಾಚಾರ್ಯರು
ಆಶ್ರಮ ಗುರುಗಳು : ಶ್ರೀಸೂರೀಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಉಪೇಂದ್ರತೀರ್ಥರು
ಗ್ರಂಥಗಳು

ವೇದಾಂತದಲ್ಲಿ ಗೀತಾಭಾಷ್ಯಪ್ರಮೇಯದೀಪಿಕಾ, ತತ್ತ್ವಪ್ರಕಾಶಿಕಾ – ಋಗ್ಭಾಷ್ಯಟೀಕಾ ಮೊದಲಾದ ಗ್ರಂಥಗಳಿಗೆ ಭಾವರತ್ನಕೋಶವೆಂಬ ಉತ್ತಮ ವ್ಯಾಖ್ಯಾನವನ್ನು, ಅಧಿಕರಣರತ್ನಮಾಲೆ ಎಂಬ ಬ್ರಹ್ಮಮೀಮಾಂಸಾರ್ಥಬೋಧಕ ಗ್ರಂಥವನ್ನು ರಚಿಸಿದರು.

ಆರಾಧನೆ : ಆಶ್ವೀಜ ಬಹುಳ ದ್ವಾದಶೀ

ಪೂರ್ಣಪ್ರಜ್ಞಮತಾಂಬೋಧಿ ಪೂರ್ಣೇಂದುಮಕಲಂಕಿನಮ್ ।
ಸುಜನಾಂಬುಧಿಭಾಸ್ವಂತಂ ಸುಮತೀಂದ್ರಗುರುಂಭಜೇ ॥

# ಶ್ರೀಉಪೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವಿಜಯೀಂದ್ರಾಚಾರ್ಯರು
ಆಶ್ರಮ ಗುರುಗಳು : ಶ್ರೀಸುಮತೀಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀವಾದೀಂದ್ರತೀರ್ಥರು

ಆರಾಧನೆ : ಮಾರ್ಗಶಿರ ಬಹುಳ ಅಷ್ಟಮೀ

ಕೃಪಾರಸಾಮೃತಾಂಬೋಧಿಮಪಾರಮಹಿಮಾನ್ವಿತಂ ।
ಉಪಾಸ್ಮಹೇತಪೋಮೂರ್ತಿಂ ಉಪೇಂದ್ರಗುರುಪುಂಗವಂ ॥

# ಶ್ರೀವಾದೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಶ್ರೀನಿವಾಸಾಚಾರ್ಯರು
ಆಶ್ರಮ ಗುರುಗಳು : ಶ್ರೀಉಪೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀವಸುಧೇಂದ್ರತೀರ್ಥರು
ಗ್ರಂಥಗಳು

ತತ್ತ್ವಪ್ರಕಾಶಿಕಾಟೀಕಾ ( ಮೀಮಾಂಸಾನಯ ದರ್ಪಣ ), ತತ್ತ್ವೋದ್ಯೋತಟಿಪ್ಪಣೀ, ಭೂಗೋಳ ವಿಚಾರ, ರಾಘವೇಂದ್ರಮಠಗತಾರ್ಚಾಗತಿಕ್ರಮ, ಗುರುಗುಣಸ್ತವನ, ನವ್ಯದುರುಕ್ತಿಶಿಕ್ಷಾ ( ಪೂರ್ವಾಶ್ರಮದಲ್ಲಿ ರಚಿಸಿದ್ದು )
ಕನ್ನಡದಲ್ಲಿ ಪದ-ಪದ್ಯಗಳನ್ನು ರಚಿಸಿ ದಾಸಸಾಹಿತ್ಯಕ್ಕೆ ಮಹದುಪಕಾರ ಮಾಡಿದ್ದಾರೆ
ಆರಾಧನೆ : **ಜೇಷ್ಠ ಶುದ್ಧ ನವಮೀ**

**ವಂದಾರುಜನಸಂದೋಹ ಮಂದಾರತರುಸನ್ನಿಭಂ ।**
**ವೃಂದಾರಕಗುರುಪ್ರಖ್ಯಂ ವಂದೇ ವಾದೀಂದ್ರದೇಶಿಕಂ ॥**

# ಶ್ರೀವಸುಧೇದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಪುರುಷೋತ್ತಮಾಚಾರ್ಯರು
ಆಶ್ರಮ ಗುರುಗಳು : ಶ್ರೀವಾದೀಂದ್ರಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀವರದೇಂದ್ರತೀರ್ಥರು
ಗ್ರಂಥಗಳು
ಗುರುಗುಣಸ್ತವನ ಮತ್ತು ತಂತ್ರಸಾರಕ್ಕೆ ವ್ಯಾಖ್ಯಾನ,
ಗುರುಪರಂಪರಾದಂಡಕ

ಆರಾಧನೆ : ಆಶ್ವೀಜ ಬಹುಳ ಸಪ್ತಮೀ

**ವಸುಧಾತುಲವಿಖ್ಯಾತಂ ವೈರಾಗ್ಯಾದಿಗುಣಾರ್ಣವಂ ।**
**ವೇದವೇದಾಂಗಚತುರಂ ವಸುಧೇಂದ್ರಗುರುಂಭಜೇ ॥**

# ಶ್ರೀವರದೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಬಲರಾಮಾಚಾರ್ಯರು
ಆಶ್ರಮ ಗುರುಗಳು : ಶ್ರೀವಸುಧೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಭುವನೇಂದ್ರತೀರ್ಥರು

ಆರಾಧನೆ : ಆಷಾಡ ಶುದ್ಧ ಷಷ್ಠೀ

**ವದೇವಿಜಯಶೀಲಾಯ ವರದಾಯವರಾರ್ಥಿನೇ ।**
**ವದಾನ್ಯಜನಸಿಂಹಾಯ ವರದೇಂದ್ರಾಯತೇ ನಮಃ ॥**

# ಶ್ರೀಧೀರೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಜಯರಾಮಾಚಾರ್ಯರು

ಶ್ರೀವರದೇಂದ್ರತೀರ್ಥರ ನಂತರ ಶ್ರೀಭುವನೇಂದ್ರತೀರ್ಥರು ಪಟ್ಟಕ್ಕೆ ಬಂದರೂ ಅವರಿಗೆ ತಮ್ಮ ಗುರುಗಳಾದ ಶ್ರೀವರದೇಂದ್ರತೀರ್ಥರ ಇಂಗಿತವು ಗೊತ್ತಾಗಿತ್ತು. ಅದಕ್ಕೆ ಅವರು ಶ್ರೀವಾದೀಂದ್ರತೀರ್ಥರ ಪೂರ್ವಾಶ್ರಮದ ಪುತ್ರರಾದ ಶ್ರೀಧೀರೇಂದ್ರತೀರ್ಥರಿಗೆ ತಮಗೆ ದೊರಕಿದ ವೇದಾಂತ ಸಾಮ್ರಾಜ್ಯವನ್ನು ಅವರಿಗೆ ಕೊಟ್ಟು ಅವರ ಸಹಾಯಕ್ಕಾಗಿ ನಿಂತರು.

ಶ್ರೀಧೀರೇಂದ್ರತೀರ್ಥರು ಮಹಾ ಸಂಸ್ಥಾನದ ಪರಂಪರೆಯಲ್ಲಿ ಬಹು ಪ್ರಖ್ಯಾತರಾಗಿದ್ದಾರೆ. ಶ್ರೀ ಭುವನೇಂದ್ರತೀರ್ಥರು ಇವರ ಜೊತೆಯಲ್ಲಿಯೇ ಇದ್ದು ಗ್ರಂಥಗಳ ವ್ಯಾಸಂಗ ಮಾಡುತ್ತಿದ್ದರು. ಶ್ರೀಧೀರೇಂದ್ರತೀರ್ಥರ ಮಹಿಮೆಯು ಅಪಾರವಾಗಿದೆ.

ಶ್ರೀಧೀರೇಂದ್ರತೀರ್ಥರು ಶ್ರೀಭುವನೇಂದ್ರತೀರ್ಥರಿಗೆ ಮಂತ್ರ ಮುದ್ರಾಧಾರಣ ಗುರುಪದೇಶ ಪೂರ್ವಕ ಪಾಠ ಪ್ರವಚನ ಮಾಡಿಸುತ್ತಾ ಸ್ವಲ್ಪಕಾಲ ಮಹಾ ಸಂಸ್ಥಾನವನ್ನಾಳಿ ಪುನಃ ಸಂಸ್ಥಾವನ್ನು ಶ್ರೀಭುವನೇಂದ್ರತೀರ್ಥರಿಗೆ ಅನುಗ್ರಹಿಸಿದರು.

**ಗ್ರಂಥಗಳು**

ಪುರುಷಸೂಕ್ತ, ಶ್ರೀಸೂಕ್ತ, ಅಂಭ್ರಣೀಸೂಕ್ತ, ಮನ್ಯುಸೂಕ್ತ ಮತ್ತು ನಾರಾಯಣೋಪನಿಷತ್ ವ್ಯಾಖ್ಯಾನ ಹಾಗೂ ಬ್ರಹ್ಮಸೂತ್ರಭಾಷ್ಯಕ್ಕೆ ವಿಷಯ ವಾಕ್ಯಾರ್ಥ ಸಂಗ್ರಹ ವೆಂಬ ಅಪೂರ್ವವಾದ ಗ್ರಂಥವನ್ನು ರಚಿಸಿದರೂಲ್ಲದೇ ಶ್ರೀರಾಘವೇಂದ್ರಸ್ತೋತ್ರಕ್ಕೆ ಮತ್ತು ಗುರುಗುಣಸ್ತವನಕ್ಕೆ ವ್ಯಾಖ್ಯಾನವನ್ನು ರಚಿಸಿದ್ದಾರೆ.

ಆರಾಧನೆ : ಫಾಲ್ಗುಣ ಶುದ್ಧ ದ್ವಾದಶೀ

**ಧರಣಿಮಂಡಲೇಖ್ಯಾತಂ ಧೈರ್ಯಾದಿಗುಣಬೃಂಹಿತಂ ।**
**ದಿಕೃತಾಶೇಷವಾದೀಭಂ ಧೀರಸಿಂಹಗುರುಂಭಜೇ ॥**

# ಶ್ರೀಭುವನೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಲಕ್ಷ್ಮೀನಾರಾಯಣಾಚಾರ್ಯರು
ಆಶ್ರಮ ಗುರುಗಳು : ಶ್ರೀವರದೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಬೋಧೇಂದ್ರತೀರ್ಥರು
ಸಮಕಾಲೀನರು
ಶ್ರೀಭುವನೇಂದ್ರತೀರ್ಥರಿಂದ ಯತ್ಯಾಶ್ರಮ ಪಡೆದ ಅಗ್ರ್ಯಾಂಶ ಸಂಭೂತರಾದ ಶ್ರೀವ್ಯಾಸತತ್ತ್ವಜ್ಞರು, ಶ್ರೀಜಗನ್ನಾಥದಾಸರು, ಶ್ರೀಸತ್ಯಬೊಧತೀರ್ಥರು, ಮಾದನೂರು ಶ್ರೀವಿಷ್ಣುತೀರ್ಥರು

ಆರಾಧನೆ : ವೈಶಾಖ ಬಹುಳ ಸಪ್ತಮೀ

**ಭೂದೇವವಂದ್ಯಪಾದಾಬ್ಜಂ ಭೂತಿಮಂತಮಭಿಷ್ಟದಂ ।**
**ಭೂತಲೇಸಾಧುವಿಖ್ಯಾತಂ ಭುವನೇಂದ್ರಗುರುಂಭಜೇ ॥**

# ಶ್ರೀಸುಬೋಧೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಮುದ್ದುಕೃಷ್ಣಾಚಾರ್ಯರು
ಆಶ್ರಮ ಗುರುಗಳು : ಶ್ರೀಭುವನೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಜನೇಂದ್ರತೀರ್ಥರು

ಆರಾಧನೆ : ಚೈತ್ರ ಬಹುಳ ದ್ವಿತೀಯಾ

**ಸುಧಾಸೇವಾಸಮುದ್ಭೂತಸುಖಸಂವಿತ್ಸಮಾಶ್ರಯಂ ।**
**ಸುಜನಾಭೀಷ್ಟದಾತಾರಂ ಸುಬೋಧೇಂದ್ರಗುರುಂಭಜೇ ॥**

# ಶ್ರೀಸುಜನೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಜಯರಾಮಾಚಾರ್ಯರು
ಆಶ್ರಮ ಗುರುಗಳು : ಶ್ರೀಸುಬೋಧೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಜ್ಞಾನೇಂದ್ರತೀರ್ಥರು

ಆರಾಧನೆ : ಕಾರ್ತೀಕ ಬಹುಳ ಅಷ್ಟಮೀ

**ಸುಯುಕ್ತಜಾಲಸಹಿತಂ ಸುಜನಾಮೋದಕಾರಿಣಂ ।**
**ಸುರೋತ್ತಮಗುರುಪ್ರಖ್ಯಂ ಸುಜನೇಂದ್ರಗುರುಂಭಜೇ ॥**

# ಶ್ರೀಸುಜ್ಞಾನೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀರಾಘವೇಂದ್ರಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಜನೇಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಧರ್ಮೇಂದ್ರತೀರ್ಥರು

**ಗ್ರಂಥಗಳು :**

ಚಂದ್ರಿಕಾಮಂಡನ ವೆಂಬ ಗ್ರಂಥವನ್ನು ರಚಿಸುವುದರೊಂದಿಗೆ 9 ಸಲ ಸುಧಾ ಮಂಗಳ ಮಾಡಿದ್ದಾರೆ.

ಆರಾಧನೆ : ಶ್ರಾವಣ ಬಹುಳ ಚತುರ್ಥೀ

**ಸುಧಾಸಾರಾರ್ಥ ತತ್ತ್ವಜ್ಞಂ ಸುರದ್ರುಮಸಮಂಸತಾಂ ।**
**ಸುರಾಧಿಪಗುರುಪ್ರಖ್ಯಂ ಸುಜ್ಞಾನೇಂದ್ರಗುರುಂಭಜೇ ॥**

# ಶ್ರೀಸುಧರ್ಮೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಗಣೇಶಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಜ್ಞಾನೇಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಗುಣೇಂದ್ರತೀರ್ಥರು

ಆರಾಧನೆ : ಪುಷ್ಯ ಬಹುಳ ಪಂಚಮೀ

**ಸುಧಾಂಶುಮಿವಸಂಭೂತಂ ಸುಜ್ಞಾನೇಂದ್ರಸುಧಾಂಬುಧೌ ।**
**ಸುಧೀಸಂದೋಹಸಂಸೇವ್ಯಂ ಸುಧರ್ಮೇಂದ್ರಗುರುಂಭಜೇ ॥**

# ಶ್ರೀಸುಗುಣೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವೆಂಕಟರಮಣಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಧರ್ಮೇಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಪ್ರಜ್ಞೇಂದ್ರತೀರ್ಥರು

ಆರಾಧನೆ : ಮಾರ್ಗಶಿರ ಶುದ್ಧ ಪೌರ್ಣಿಮಾ

**ಸುಧರ್ಮೇಂದ್ರಕರಾಬ್ಜೋತ್ಥಂ ಸುವಿದ್ವನ್ಮಣಿರಾಜಿತಂ ।**
**ಸುಮೃಷ್ಟಾನ್ನಪ್ರದಾತಾರಂ ಸುಗುಣೇಂದ್ರಗುರುಂಭಜೇ ॥**

# ಶ್ರೀಸುಪ್ರಜ್ಞೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವೆಂಕಟರಾಘವೇಂದ್ರಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಗುಣೇಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಕೃತೀಂದ್ರತೀರ್ಥರು

ಆರಾಧನೆ : ಮಾಘ ಬಹುಳ ಷಷ್ಠೀ

**ಸುಧಾಜಿಜ್ಞಾಸಯಾಸರ್ವಸುಬುಧಾನಂದದಾಯಕಾನ್ ।**
**ಸುಪ್ರಜ್ಞೇಂದ್ರಮುನೀನ್ವಂದೇ ಸದಾವಿದ್ಯಾಗುರೂನ್ಮಮ ॥**

# ಶ್ರೀಸುಕೃತೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವೇಣುಗೋಪಾಲಾಚಾರ್ಯರು
ಆಶ್ರಮ ಗುರುಗಳು : ಶ್ರೀಸುಪ್ರಜ್ಞೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಶೀಲೇಂದ್ರತೀರ್ಥರು

ಆರಾಧನೆ : ಆಶ್ವೀಜ ಶುದ್ಧ ದಶಮೀ

**ಸುವಿದ್ವತ್ಕಮಲೋಲ್ಲಾಸಮಾರ್ತಾಂಡಂ ಸುಗುಣಾಕರಂ ।**
**ಸಚ್ಛಾಸ್ತ್ರಾಸಕ್ತಹೃದಯಂ ಸುಕೃತೀಂದ್ರಗುರುಂಭಜೇ ॥**

# ಶ್ರೀಸುಶೀಲೇಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಕೃಷ್ಣಾಚಾರ್ಯರು
ಆಶ್ರಮ ಗುರುಗಳು : ಶ್ರೀಸುಕೃತೀಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುವ್ರತೀಂದ್ರತೀರ್ಥರು

ಆರಾಧನೆ : ಆಷಾಡ ಶುದ್ಧ ತೃತೀಯಾ

**ಸುಧಾದ್ಯಮಲಸದ್ಬೋಧಂ ಸುಕೀರ್ತಿವಿಲಸದ್ದಿಶಂ ।**
**ಸುಧೀಸಂಸ್ತುತ್ಯಸುಗುಣಂ ಸುಶೀಲೇಂದ್ರಗುರುಂಭಜೇ ॥**

# ಶ್ರೀಸುವ್ರತೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಹುಲಿ ಕೃಷ್ಣಾಚಾರ್ಯರು
ಆಶ್ರಮ ಗುರುಗಳು : ಶ್ರೀಸುಶೀಲೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಯಮೀಂದ್ರತೀರ್ಥರು

ಆರಾಧನೆ : ವೈಶಾಖ ಬಹುಳ ದ್ವಾದಶೀ

**ಸುಶೀಲೇಂದ್ರಕರಾಬ್ಜೋತ್ಥಂ ಸುಶಾಂತ್ಯಾದಿಗುಣಾರ್ಣವಂ ।**
**ಸುಧಾಪ್ರವಚನಾಸಕ್ತಂ ಸುವ್ರತೀಂದ್ರಗುರುಂಭಜೇ ॥**

# ಶ್ರೀಸುಯಮೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಶ್ರೀನಿವಾಸಮೂರ್ತ್ಯಾಚಾರ್ಯರು
ಆಶ್ರಮ ಗುರುಗಳು : ಶ್ರೀಸುವ್ರತೀಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀಸುಜಯೀಂದ್ರತೀರ್ಥರು

ಆರಾಧನೆ : ಪುಷ್ಯ ಶುದ್ಧ ದ್ವಿತೀಯಾ

**ಸುಖತೀರ್ಥಮತಾಬ್ಧಿಂದುಂ ಸುಧೀಂದ್ರಸುತಸೇವಕಂ ।**
**ಸುಧಾಪರಿಮಳಾಸಕ್ತಂ ಸುಯಮೀಂದ್ರಗುರುಂಭಜೇ ॥**

# ಶ್ರೀಸುಜಯೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀವೆಂಕಟರಾಘವೇಂದ್ರಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಯಮೀಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಶಮೀಂದ್ರತೀರ್ಥರು

ಆರಾಧನೆ : ಮಾಘ ಶುದ್ಧ ಚತುರ್ಥೀ

**ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।**
**ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂಭಜೇ ॥**

# ಶ್ರೀಸುಶಮೀಂದ್ರತೀರ್ಥರು

ಪೂರ್ವಾಶ್ರಮದ ಹೆಸರು : ಶ್ರೀಸುಪ್ರಜ್ಞೇಂದ್ರಾಚಾರ್ಯರು

ಆಶ್ರಮ ಗುರುಗಳು : ಶ್ರೀಸುಜಯೀಂದ್ರತೀರ್ಥರು

ಆಶ್ರಮ ಶಿಷ್ಯರು : ಶ್ರೀಸುಯತೀಂದ್ರತೀರ್ಥರು

ಆರಾಧನೆ : ಚೈತ್ರ ಬಹುಳ ದ್ವಿತೀಯಾ

**ಸುಧೀಜನಸುಮಂದಾರಂ ಸುಧೀಂದ್ರಸುತಸುಪ್ರಿಯಂ ।**
**ಸುಶಮೀಂದ್ರಗುರುಂವಂದೇ ಸುಜಯೀಂದ್ರಕರೋದ್ಭವಂ ॥**

# ಅಧುನಾ ಪೀಠಾಧಿಪತಿಗಳು

**ಜೀಯಾತ್ ಶ್ರೀಸುಯತೀಂದ್ರತೀರ್ಥ ಸಂಯಮಿ**
**ಮಣಿಃ ವೇದಾಂತರಾಜ್ಯೇ ಚಿರಂ ॥**